ಅಧ್ಯಕ್ಷರು : ನೋ ಡಿಸ್ಕಷನ್. ಪ್ರಸ್ತಾಪ ಮಾತ್ರ ಮಾಡಿ. ನೋ ಡಿಸ್ಕಷನ್.

3. ಚಾಮರಾಜನಗರ ಜಿಲ್ಲೆಯಾದ್ಯಂತ ರೈತರು ಎದುರಿಸುತ್ತಿರುವ ವಿದ್ಯುತ್ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : (ಸಂತೇಮರನಹಳ್ಳಿ) : ಮಾನ್ಯ ಅಧ್ಯಕ್ಷರೆ, ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಿನ್ನೆ ದಿವಸ ಕೂಡ ನಮ್ಮ ಚಾಮರಾಜನಗರ ಜಿಲ್ಲಾಕೇಂದ್ರ ಸ್ಥಾನದಲ್ಲಿ ಜಿಲ್ಲೆಯಾದ್ಯಂತ ರೈತರು ಈ ವಿದ್ಯುತ್ತಿನ ಸಮಸ್ಯೆ ಮತ್ತು ಕುಡಿಯುವ ನೀರಿನ ಸಮಸ್ಯೆ ವಿಚಾರಕ್ಕೆ ಸಂಬಂಧಿಸಿದಂತೆ, ಈ ಬರ್ದ ಹಿನ್ನಲೆಯಲ್ಲಿ ಯಾವುದೇ ತರಹದ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಬಗೆಹರಿಸಿಲ್ಲ ಎಂದು ಹೇಳಿ ನಮ್ಮ ಜಿಲ್ಲೆಯ ರೈತರು ನಿನ್ನೆ ದಿವಸ 11 ಗಂಟೆಯಿಂದ ಚಾಮರಾಜನಗರ ಜಿಲ್ಲಾ ಅಧಿಕಾರಿಗಳ ಕಛೇರಿಯಲ್ಲಿ ಅನಿರ್ದಿಷ್ಟವಾಗಿ ಮುಷ್ಕರ ಹೂಡಿದ್ದಾರೆ, ತಾವು ಬೆಳ್ಳಿಗೆ ಚರ್ಚೆ ಮಾಡಿದಂತೆ ಅಲ್ಲಿ ಪಾತ್ರೆಗಳು ಕೂಡ ಬಂದಿವೆ ಅವರುಗಳು ಅಲ್ಲೇ ಠಿಕಾಣಿ ಹೂಡಿ ಅಡಿಗೆ ಕೂಡ ಮಾಡಿರುವಂತಹ ಸನ್ನಿವೇಶ ಆಗಿದೆ. ಹಾಗಾಗಿ ಈ ವಿಚಾರದಲ್ಲಿ ಘನ ಸರ್ಕಾರ ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಇವತ್ತು ನಮ್ಮ ಭಾಗಕ್ಕೆ ಸರ್ಕಾರ ಏನು ಕಾನೂನಿನ ಅನ್ವಯ ವಿದ್ಯುತ್ತನ್ನು ಕನಿಷ್ಟ ಪ್ರಮಾಣದಲ್ಲಿ ಸರಬರಾಜು ಮಾಡುತ್ತೇವೆಂದು ಹೇಳಿದ್ದಾರೆ, ಆ ಕನಿಷ್ಟ ವಿದ್ಯುತ್ತನ್ನು ಕೂಡ ಸರಬರಾಜು ಮಾಡುತ್ತಿಲ್ಲ. ನಮ್ಮ 220 ಕೆವಿಗೆ 0.5 ಕೆವಿ ಇರಬಹುದು. ಆ ಟೆಕ್ನಿಕಲ್ ಪಾಯಿಂಟ್ ನನಗೆ ಬರುತ್ತಿಲ್ಲ. ಅಷ್ಟನ್ನು ಮಾತ್ರ ಸರಬರಾಜು ಮಾಡುತಿದ್ದಾರೆ. ಕನಿಷ್ಟ ಗ್ರಾಮಾಂತರದಲ್ಲಿರತಕ್ಕ ಕುಡಿಯುವ ನೀರಿಗೆ ಕೂಡ ಇವತ್ತು ತೊಂದರೆ ಇದೆ. ಜನರಿಗೆ ಇರಬಹುದು ಅಥವಾ ಜಾನುವಾರಿಗೆ ಇರಬಹುದು. ಸಮಸ್ಯೆ ಇವತ್ತು ಉದ್ಭವ ಆಗಿದೆ, ಇವತ್ತು ವಿದ್ಯುತ್ತಿನ ಸಮಸ್ಯೆ ಕಾಡುತ್ತಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಬಹಳ ಗಂಭೀರವಾಗಿ ಸಂಬಂಧಪಟ್ಟವರ ಜೊತೆಯಲ್ಲಿ ಸಮಲೋಚನೆ ಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಅವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

5. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾಪ

†ಶ್ರೀ ಎಸ್.ಪಿ. ಮುದ್ದಹನುಮೇಗೌಡ(ಕುಣಿಗಲ್): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

2003 ಫೆಬ್ರವರಿ 27ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ಸದಸ್ಯರುಗಳಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಶ್ರೀ ಎಸ್. ಜಿ. ನಂಜಯ್ಯನಮಠ (ಗುಳೇದಗುಡ್ಡ): ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವವನ್ನು ಅನುಮೋದಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 176ನೇ ಅನುಚ್ಛೇದದ ಅಡಿ ಇವತ್ತು ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ನಮ್ಮೆಲ್ಲರಿಗೂ ಕೂಡ ತಮ್ಮ ವಿಚಾರಪೂರ್ವವಾದಂತಹ ಒಂದು ಭಾಷಣವನ್ನು ಈ ಸದನದ ಮುಂದೆ ಮಂಡಿಸಿದ್ದಾರೆ, ನಮ್ಮ ನಿಯಮಾವಳಿ 20 ರಮೂಲಕ ನಾವೆಲ್ಲರೂ ಕೂಡ ಏನು ಗೌರವಾನ್ವಿತ ರಾಜ್ಯಪಾಲರು ಅನೇಕ ವಿಚಾರಗಳನ್ನು ತಮ್ಮ ಭಾಷಣದ ಮೂಲಕ ಈ ಸಭೆಗೆ ಮಂಡಿಸಿದ್ದಾರೆ, ಅವರಿಗೆ ನಮ್ಮ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸತಕ್ಕದ್ದು